ಕರ್ನಾಟಕ ವಿಧಾನ ಸಭೆ

ಹತ್ತನೆಯ ವಿಧಾನ ಸಭೆ

(ಮೂರನೆಯ ಅಧಿವೇಶನ)

ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ವಿಧೇಯಕ, 1995

(1995ರ ವಿಧಾನಸಭಾ ವಿಧೇಯಕ ಸಂಖ್ಯೆ 27)

ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 28) ಈ ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ : (1) ಈ ಅಧಿನಿಯಮವನ್ನು ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ಮತ್ತು ನೀರಿನ ದರ ವಿಧಿಸುವ) (ಎರಡನೇ ತಿದ್ದುಪಡಿ) ಅಧಿನಿಯಮ, 1995 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಯಲ್ಲಿ ಬರತಕ್ಕದ್ದು.

2. 10ನೇ ಪ್ರಕರಣದ ತಿದ್ದುಪಡಿ : ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 28) 10ನೇ ಪ್ರಕರಣದಲ್ಲಿ,

(1) (1)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ :

"ಪರಂತು, ಯಾವುದೇ ನೀರಾವರಿ ಕಾಮಗಾರಿಯ ಮೂಲಕ ಅಥವಾ (ಇನ್ನು ಮುಂದೆ ನಿಗಮ ಎಂದು ಕರೆಯಲಾಗುವ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಮೂಲಕ ಅಥವಾ ಅದರ ಪರವಾಗಿ ನೀರು ಸರಬರಾಜು ಮಾಡಲಾಗುವ ಅಥವಾ ಲಭ್ಯವಾಗುವಂತೆ ಮಾಡಲಾದ ಯಾವುದೇ ಪ್ರದೇಶ ಅಥವಾ ಪ್ರದೇಶಗಳಲ್ಲಿ ನೀರಿನ ದರಗಳನ್ನು ಅಂಥ ಪ್ರದೇಶ ಅಥವಾ ಪ್ರದೇಶಗಳಲ್ಲಿನ ಸದರಿ ನಿಗಮದ ಮೂಲಕ ವಿಧಿಸತಕ್ಕದ್ದು ಮತ್ತು ವಸೂಲು ಮಾಡತಕ್ಕದ್ದು."

(2) (1ಎ) ಉಪ-ಪ್ರಕರಣದಲ್ಲಿ,

(ಎ) "ಸರ್ಕಾರವು ನೀರು ಸರಬರಾಜು ಮಾಡಬಹುದು" ಎಂಬ ಪದಗಳಿಗೆ "ಸರ್ಕಾರ ಅಥವಾ ಸಂದರ್ಭಾನುಸಾರವಾಗಿ ನಿಗಮವು ನೀರು ಸರಬರಾಜು ಮಾಡಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ;

(ಬಿ) "ಸರ್ಕಾರವು ನೀರಿನ ಪ್ರಮಾಣದ" - ಎಂಬ ಪದಗಳಿಗೆ "ಸರ್ಕಾರ ಅಥವಾ ಸಂದರ್ಭಾನುಸಾರ ನಿಗಮವು ನೀರಿನ ಪ್ರಮಾಣದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957ಕ್ಕೆ ಸೂಕ್ತ ತಿದ್ದುಪಡಿ ಮಾಡುವ ಮೂಲಕ, ಯಾವುದೇ ನೀರಾವರಿ ಕಾಮಗಾರಿಯಿಂದ ನೀರಿನ ಸರಬರಾಜು ಕಾಮಗಾರಿಯನ್ನು ಕೃಷ್ಣಾಭಾಗ್ಯ ಜಲನಿಗಮಕ್ಕೆ ವಹಿಸಿಕೊಡುವುದು ಮತ್ತು ಸದರಿ ನಿಗಮಕ್ಕೆ ನೀರಿನ ದರಗಳನ್ನು ವಿಧಿಸುವ ಮತ್ತು ವಸೂಲು ಮಾಡುವ ಹೊಣೆಗಾರಿಕೆಯನ್ನು ವಹಿಸಿಕೊಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

ಆರ್ಥಿಕ ಜ್ಞಾಪನ

ಇದುವರೆಗೂ ನೀರಿನ ದರಗಳನ್ನು ಸರ್ಕಾರವು ವಿಧಿಸಿ ವಸೂಲು ಮಾಡುತ್ತಿದ್ದು ಈಗ ಪ್ರಸ್ತಾವಿತ ತಿದ್ದುಪಡಿಯಿಂದಾಗಿ ನೀರಿನ ದರಗಳನ್ನು ವಿಧಿಸಲು ಮತ್ತು ವಸೂಲು ಮಾಡಲು ಕೃಷ್ಣಾಭಾಗ್ಯ ಜಲ ನಿಗಮಕ್ಕೆ ವಹಿಸಿಕೊಡುವುದರಿಂದ ಸರ್ಕಾರಕ್ಕೆ ಆದಾಯದಲ್ಲಿ ನಷ್ಟವುಂಟಾಗುತ್ತದೆ.

ಹೆಚ್.ಡಿ. ದೇವೇಗೌಡ
ಮುಖ್ಯಮಂತ್ರಿಗಳು

ನಂ.ಹು. ಮುತ್ತಲಗೇರಿ,
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 28) ಉದ್ಧೃತ ಭಾಗ

xx xx xx

10. ನೀರಿನ ದರ ವಿಧಿಸುವುದು (1)

(ಕ) xx xx xx

(ಖ) ಸರ್ಕಾರಕ್ಕೆ ಸೇರಿದ ಅಥವಾ ಸರ್ಕಾರವು ಅಥವಾ ಅದರ ಪರವಾಗಿ ನಿರ್ಮಿಸಲಾದ ಯಾವುದೇ ಕಾಮಗಾರಿಯಿಂದ ನೀರಾವರಿ ಉದ್ದೇಶಗಳಿಗಾಗಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ನೀರನ್ನು ಸರಬರಾಜು ಮಾಡಿದಾಗ, ಲಭ್ಯವಾಗುವಂತೆ ಮಾಡಿದಾಗ ಅಥವಾ ಬಳಸಿದಾಗ ; ಮತ್ತು

(ಗ) ಅಂಥ ಯಾವುದೇ ಕಾಮಗಾರಿಯಿಂದ ನೇರವಾಗಿ ಹರಿಯುವ ಅಥವಾ ಜಿನುಗುವ ಅಥವಾ ಸುತ್ತಿ ಹರಿಯುವ ಮೂಲಕ, ಹೊಂದಿಕೊಂಡಿರುವ

ಭೂಮಿಯಿಂದ ಅಥವಾ ಅದರ ಮೂಲಕ ಜಿನುಗುವಿಕೆ ಅಥವಾ ಚರಂಡಿಯ ನೀರು, ಸಾಗುವಳಿಯಲ್ಲಿರುವ ಯಾವುದೇ ಭೂಮಿಗೆ ನೀರು ಒದಗಿಸಿದಾಗ ಅಥವಾ ಜಲಾಶಯಕ್ಕೆ ಹರಿದು ಅಲ್ಲಿಂದ ನೇರವಾಗಿ ಹರಿಯುವ ಮೂಲಕ ಅಥವಾ ಜಿನುಗುವ ಅಥವಾ ಸುತ್ತಿ ಹರಿಯುವ ಮೂಲಕ, ತೊಂದಿಕೊಂಡಿರುವ ಭೂಮಿಯಿಂದ ಅಥವಾ ಅದರ ಮೂಲಕ ಜಿನುಗುವಿಕೆ ಅಥವಾ ಚರಂಡಿಯ ನೀರು, ಸಾಗುವಳಿಯಲ್ಲಿರುವ ಯಾವುದೇ ಭೂಮಿಗೆ ನೀರು ಒದಗಿಸಿದಾಗ ಮತ್ತು ಜಿಲ್ಲಾಧಿಕಾರಿಗಳು ಅಂಥ ಭೂಮಿಯಲ್ಲಿ ಬೆಳೆದಿರುವ ಬೆಳೆಗೆ ಅಂಥ ನೀರಾವರಿಯು ಲಾಭದಾಯಕವಾಗಿದೆ ಮತ್ತು ಆವಶ್ಯಕತೆಗಳಿಗೆ ಸಾಕಷ್ಟಾಗಿದೆಯೆಂದು ಅಭಿಪ್ರಾಯಪಟ್ಟಿರುವಾಗ ;

(ಘ) ಆಂಧ್ರ ರಾಜ್ಯ ಅಧಿನಿಯಮ, 1953ರ 67ನೇ ಪ್ರಕರಣದಡಿ ಸ್ಥಾಪಿಸಲಾದ ಪ್ರಾಧಿಕಾರವು ಸರ್ಕಾರಕ್ಕೆ ಸರಬರಾಜು ಮಾಡಿದ ಅಥವಾ ಲಭ್ಯವಿರುವಂತೆ ಮಾಡಿದ ನೀರನ್ನು ನೀರಾವರಿ ಉದ್ದೇಶಗಳಿಗಾಗಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ಸರಬರಾಜು ಮಾಡಿದಾಗ, ಲಭ್ಯವಿರುವಂತೆ ಮಾಡಿದಾಗ ಅಥವಾ ಬಳಸಿದಾಗ,

ಸರ್ಕಾರವು, ಇಲ್ಲಿ ಇನ್ನು ಮುಂದೆ ನೀರಿನ ದರವೆಂದು ಉಲ್ಲೇಖಿಸಲಾಗುವ ಪ್ರತ್ಯೇಕ ದರವನ್ನು ಅಂಥ ನೀರಿಗಾಗಿ ವಿಧಿಸಲು ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಸರ್ಕಾರವು ಯಾವ ದರದಲ್ಲಿ ಅಂಥ ನೀರಿನ ದರವನ್ನು ವಿಧಿಸುವುದೋ ಆ ದರವನ್ನು ನಿಯಮಿಸಬಹುದು ಮತ್ತು ಇದು,

(i) ಬೇರೆ ಬೇರೆ ಉದ್ದೇಶಗಳಿಗಾಗಿ ಸರಬರಾಜು ಮಾಡಿದ, ಲಭ್ಯವಾಗುವಂತೆ ಮಾಡಿದ ಅಥವಾ ಬಳಸಿದ ನೀರಿನ ಸಂಬಂಧದಲ್ಲಿ ಬೇರೆ ಬೇರೆಯಾಗಿರಬಹುದು;

(ii) ಬೇರೆ ಬೇರೆ ನೀರಾವರಿ ಕಾಮಗಾರಿಗಳಿಂದ ಸರಬರಾಜು ಮಾಡಿದ, ಲಭ್ಯವಾಗುವಂತೆ ಮಾಡಿದ ಅಥವಾ ಬಳಸಿದ ನೀರಿನ ಸಂಬಂಧದಲ್ಲಿ ಮತ್ತು ಅಂಥ ಭೂಮಿಯಲ್ಲಿ ಬೆಳೆಯಲಾದ, ಬೆಳೆಯಬಹುದಾದ ಬೆಳ ಅಥವಾ ಬೆಳೆಗಳ ಸಂಬಂಧದಲ್ಲಿ ಅಥವಾ ಸಂಬಂಧಪಡದೇ, ನೀರನ್ನು ಸರಬರಾಜು ಮಾಡಿದಾಗ, ಲಭ್ಯವಾಗುವಂತೆ ಮಾಡಿದಾಗ ಅಥವಾ ಬಳಸಿದಾಗ ಬೇರೆ ಬೇರೆಯಾಗಿರಬಹುದು ;

(iii) ಇತರ ಯಾವುದೇ ಕಾನೂನಿನಡಿ ಸಂದಾಯವಾಗಬೇಕಾದ ನೀರಿನ ದರವೇನಾದರೂ ಇದ್ದಲ್ಲಿ ಅದಕ್ಕೆ ಬದಲಾಗಿರಬಹುದು ;

ಮತ್ತು ವಿಧಿಸತಕ್ಕ ನೀರಿನ ದರದ ಮೊಬಲಗನ್ನು ಯಾವ ವಿಧಾನದಲ್ಲಿ ಮತ್ತು ಯಾವ ಪ್ರಾಧಿಕಾರವು ನಿರ್ಣಯಿಸತಕ್ಕುದೋ ಅದನ್ನು ಸಹ ನಿಯಮಿಸಬಹುದು.

(1ಎ) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11), ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರಡಿ) (1960ರ ಕರ್ನಾಟಕ ಅಧಿನಿಯಮ 17), ನೋಂದಾಯಿತವಾದ ನೀರು ಬಳಕೆದಾರರ ಸಹಕಾರ ಸಂಘಕ್ಕೆ ನೀರಾವರಿ ಉದ್ದೇಶಕ್ಕಾಗಿ ಸರ್ಕಾರವು ನೀರು ಸರಬರಾಜು ಮಾಡಬಹುದು ಅಥವಾ ನೀರು ಲಭ್ಯವಾಗುವಂತೆ ಮಾಡಬಹುದು ಮತ್ತು ಸರ್ಕಾರವು ನೀರಿನ ಪ್ರಮಾಣದ ಆಧಾರದ ಮೇಲೆ ನೀರು ದರಗಳನ್ನು ವಿಧಿಸಿ ಅಂಥ ಸಂಘಗಳಿಂದ, ವಸೂಲು ಮಾಡತಕ್ಕದ್ದು. ಸರ್ಕಾರವು ವಿಧಿಸತಕ್ಕ ನೀರಿನ ದರದ ಮೊಬಲಗನ್ನು ಯಾವ ಪ್ರಾಧಿಕಾರವು ನಿರ್ಣಯಿಸತಕ್ಕದ್ದೋ ಅದನ್ನು ನಿಯಮಿಸತಕ್ಕದ್ದು, ಅಂಥ ಸಂಘಗಳು ರೈತರಿಗೆ ನೀರು ಸರಬರಾಜು ಮಾಡಬಹುದು ಮತ್ತು ಪ್ರತಿಯೊಬ್ಬ ರೈತನಿಂದ ನೀರಿನ ದರವನ್ನು ವಸೂಲಿ ಮಾಡಬಹುದು.

xx xx xx